## ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು – 560 023.

**ದಿನಾಂಕ: 18-12-2022**

# 18ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ

## ಸಚಿತ್ರಗಳ ಪಕ್ಷಿ ನೋಟ

**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ತನ್ನ 18ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ: 18-12-2022 ರಂದು ಭಾನುವಾರ ಸಂಜೆ 04-00 ಗಂಟೆಯಿಂದ ಸಂಘದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.**













ಪ್ರತೀತಿಯಂತೆ ಉದ್ಘಾಟನೆಯ ನಂತರ ಶ್ರೀಮತಿ ಪ್ರಭಾ ಇನಾಂದಾರ್ ರವರಿಂದ ಪ್ರಾರ್ಥನಾ ಕಾರ್ಯಕ್ರಮ ನಡೆಯಿತು.







ಪ್ರಾರ್ಥನಾ ನಂತರ ಪ್ರಸ್ತುತ ಸಾಲಿನಲ್ಲಿ ಅಗಲಿದ ಸದಸ್ಯರು ಹಾಗೂ ಇನ್ನಿತರ ಪೊಲೀಸ್ ಚೇತನಗಳ ನಾಮ ಪಠಣ ಸ್ತುತಿಸಿ, ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯಕ್ರಮವನ್ನು ಶ್ರೀ ಎಸ್.ಎನ್. ಗಂಗಾಧರ, ಉಪಾಧ್ಯಕ್ಷರು ನಡೆಸಿಕೊಟ್ಟರು.







ಹಾಲಿ ವರ್ಷದಲ್ಲಿ ಸ್ವರ್ಗಸ್ಥರಾದ ಸದಸ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಿದ ನಂತರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ಶ್ರೀ ಹೆಚ್.ಟಿ. ಕೃಷ್ಣಪ್ಪ, ಉಪಾಧ್ಯಕ್ಷರು ಸ್ವಾಗತ ಕೋರಿದರು.







ಹಿರಿಯ ಸದಸ್ಯರಾದ ಶ್ರೀ ಸಿ.ಬಿ. ಪೂವಯ್ಯ ಮತ್ತು ಶ್ರೀ ಎನ್. ಮಹಾದೇವನ್ ರವರುಗಳಿಗೆ ಸುದೀರ್ಘ ಆಯಸ್ಸು ಕೋರಿ ಸಂಘದ ವತಿಯಿಂದ ಸನ್ಮಾನಿಸಲಾಯಿತು.











**2022ನೇ ಸಾಲಿನಲ್ಲಿ ಸ್ವಾತಂತ್ರ್ಯೋತ್ಸವ ದಿನಾಚರಣೆ ಅಂಗವಾಗಿ ದಯಪಾಲಿಸುವ ಮಾನ್ಯ ರಾಷ್ಟ್ರಪತಿಯವರ ಶ್ಲಾಘನೀಯ ಸೇವಾ ಪದಕ ಪುರಸ್ಕೃತ ಪೊಲೀಸ್ ಅಧಿಕಾರಿಗಳನ್ನು ಮಹಾಸಭೆಗೆ ಆಹ್ವಾನಿಸಿ ಅವರ ಸೇವೆಯನ್ನು ಗುಣಗಾನ ಮಾಡಿ ಸನ್ಮಾನಿಸಲಾಯಿತು.**



























**ಹಿಂದಿನ ಸಾಲಿನ "ಸರ್ವ ಸದಸ್ಯರ ಮಹಾಸಭೆ"ಯ ನಡವಳಿಗಳ ಸಂಕ್ಷಿಪ್ತ ಮಂಡನೆ ಹಾಗೂ 2021–22ನೇ ಸಾಲಿನ ಆಡಿಟ್ ವರದಿ ಮಂಡನೆಯನ್ನು ಸಂಘದ ಕಾರ್ಯದರ್ಶಿಯವರಾದ ಶ್ರೀ ಕುಮಾರ ಎಸ್. ಕರನಿಂಗ ರವರು ನೆರವೇರಿಸಿದರು.**









ಸಂಘದ ಆದಾಯ, ಖರ್ಚು-ವೆಚ್ಚ ಮತ್ತು ಉಳಿತಾಯದ ಲೆಕ್ಕ ಪತ್ರಗಳ ವಿವರಣೆ ಹಾಗೂ 2022-23ನೇ ಸಾಲಿನ ಅಂದಾಜು ಆಯ-ವ್ಯಯ ಮಂಡನೆಯನ್ನು ಖಜಾಂಚಿಯವರ ಅನುಪಸ್ಥಿತಿಯಲ್ಲಿ ಕಾರ್ಯದರ್ಶಿಯವರಾದ ಶ್ರೀ ಕುಮಾರ ಎಸ್. ಕರನಿಂಗ ರವರೇ ನೆರವೇರಿಸಿದರು.











“18ನೇ ಸರ್ವ ಸದಸ್ಯರ ಮಹಾಸಭೆ”ಯಲ್ಲಿ ಸಂಘದ ಕಾರ್ಯದರ್ಶಿಯವರಾದ ಶ್ರೀ ಕುಮಾರ ಎಸ್. ಕರನಿಂಗರವರ ವಿಸ್ತೃತ ವರದಿಗೆ ಸಂಬಂಧಿಸಿದಂತೆ ಸದಸ್ಯರಾದ ಶ್ರೀ ಜಿ.ಸಿ. ಮಂಜುನಾಥ್ ರವರು ಪ್ರಶ್ನೆ ಕೇಳುತ್ತಿರುವುದು.



ಕಾರ್ಯದರ್ಶಿಯವರಾದ ಶ್ರೀ ಕುಮಾರ ಎಸ್. ಕರನಿಂಗರವರು ಪ್ರಶ್ನೆಗೆ ಉತ್ತರಿಸುತ್ತಿರುವುದು.






ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎನ್. ನಾಗರಾಜ ರವರು ಕೇಳಿದ್ದ ಪ್ರಶ್ನೆಗೆ ಪ್ರಸಕ್ತ ಸಾಲಿನ ಅಧ್ಯಕ್ಷರಾದ ಶ್ರೀ ಬಿ.ಕೆ. ಶಿವರಾಮ್ ರವರು ಉತ್ತರಿಸುತ್ತಿರುವುದು.

ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎನ್. ನಾಗರಾಜ ರವರು ಪ್ರಶ್ನೆ ಕೇಳುತ್ತಿರುವ ಸಂದರ್ಭದ ಫೋಟೊ....



ಸಂಘದ ಸದಸ್ಯರು ಸರ್ವ ಸದಸ್ಯರ ಮಹಾಸಭೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುತ್ತಿರುವುದು. . . . .















ಮಹಾಸಭೆಯ ಅಂತಿಮ ಕಾರ್ಯಕ್ರಮ ವಂದನಾರ್ಪಣೆಯನ್ನು ಸಂಘದ ವಲಯ ಕಾರ್ಯದರ್ಶಿಯವರಾದ ಶ್ರೀ ಆರ್. ಗಿರಿಜೇಶ್ ರವರು ನಿರ್ವಹಿಸಿದರು.





ಸಂಘದ ಅಧ್ಯಕ್ಷರಾದ ಶ್ರೀ ಬಿ. ಕೆ. ಶಿವರಾಮ್ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ನೆರೆದಿದ್ದ ಸದಸ್ಯರೆಲ್ಲರಿಗೂ ಸೌಹಾರ್ದಯುತ ಹಾಗೂ ಆರೋಗ್ಯಕರ ಬೆಳವಣಿಗೆಗಳಿಗೆ ಧನ್ಯವಾದ ತಿಳಿಸಿದರು.







ರಾಷ್ಟ್ರಗೀತೆಯೊಂದಿಗೆ ಸಭಾ ಕಾರ್ಯಕ್ರಮ ಮುಕ್ತಾಯವಾಗಿರುತ್ತದೆ.



ಕಾರ್ಯಕ್ರಮದ ಅಂತ್ಯದಲ್ಲಿ ಆಯೋಜಿಸಿದ್ದ ಪುಷ್ಕಳ ಭೋಜನವನ್ನು ಆಗಮಿಸಿದ್ದ ಸದಸ್ಯರೆಲ್ಲ ಸವಿದು ಸಂಭ್ರಮಿಸಿದರು.













ಸಂಘದ ಸದಸ್ಯರಾದ ಶ್ರೀ ಪ್ರಭು ಸ್ವಾಮಿ ಯವರೊಂದಿಗೆ ಸಂಘದ ಕಾರ್ಯಕಾರೀ ಸಮಿತಿ ಸದಸ್ಯರಾದ ಶ್ರೀ ಜಿ.ಎ. ಜಗದೀಶ್ ರವರುಗಳು ಕಾರ್ಯಕ್ರಮದ ನಿರೂಪಣೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.











ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಮಹಾಸಭೆ ಕಾರ್ಯಕ್ರಮ ಸಂಪನ್ನ ವಾಗಿರುತ್ತದೆ.

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು – 560 023.

* * * * *